

ಜೊಜೊಹಾತು – ಝಾರ್ಖಂಡ್ ರಾಜ್ಯದ ಚಾಯಿಬಾಸಾ ಜಿಲ್ಲಾ ಕೇಂದ್ರದಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿರುವ, ಕಾಡಿನ ಮಧ್ಯದಲ್ಲಿರುವ ಒಂದು ಪುಟ್ಟ ಹಳ್ಳಿ. ಸಮೀಪದಲ್ಲಿರುವ ಗಣಿಯೊಂದಕ್ಕೆ ಹೋಗುವ ರಸ್ತೆ, ಸೇತುವೆಯ ನಿರ್ಮಾಣದ ಕಾಮಗಾರಿ ನಕ್ಸಲರ ವಿರೋಧದ ನಡುವೆಯೂ ಮತ್ತೆ ಆರಂಭವಾಗಿತ್ತು. ಸಮೀಪದಲ್ಲಿಯೇ ಒಂದು ಪುರಾತನ ಕಟ್ಟಡವಿತ್ತು. ಉಪಯೋಗಕ್ಕೆ ಬರುವ ರೀತಿಯಲ್ಲಿ ಅದನ್ನು ದುರಸ್ತಿ ಮಾಡಲಾಗಿತ್ತು. ಸೇತುವೆಯ ಕಾಮಗಾರಿಗಾಗಿ ಲಾರಿಗಳಲ್ಲಿ ತುಂಬಿಸಿಕೊಂಡು ಬರಲಾಗುವ ಸಿಮೆಂಟ್ ಚೀಲಗಳನ್ನು ಅಲ್ಲಿ ಸಂಗ್ರಹಿಸಿ ಇಡಲಾಗಿತ್ತು. ಪ್ರತಿ ದಿನದ ಅಗತ್ಯಕ್ಕೆ ಬೇಕಾಗುವಷ್ಟು ಸಿಮೆಂಟ್ ಚೀಲಗಳನ್ನು ಎತ್ತಿನ ಗಾಡಿಯಲ್ಲಿ ಹೇರಿಕೊಂಡು, ಕಾಮಗಾರಿ ನಡೆಯುವ ಸ್ಥಳಕ್ಕೆ ತೆಗೆದುಕೊಂಡು ಹೋಗಲಾಗುತ್ತಿತ್ತು. ಒಂದು ವೇಳೆ ದಿನದ ಕೊನೆಯಲ್ಲಿ ಬಳಸದೇ ಉಳಿದರೆ, ಮತ್ತೆ ಅವುಗಳನ್ನು ಇಲ್ಲಿಗೇ ತಂದು ಇಡಲಾಗುತ್ತಿತ್ತು; ಒಟ್ಟಿನಲ್ಲಿ ಅದು ತಾತ್ಕಾಲಿಕ ಗೋದಾಮಾಗಿ ಪರಿವರ್ತನೆಗೊಂಡಿತ್ತು.

ಗುತ್ತಿಗೆದಾರ ಆಗಾಗ ಇಲ್ಲಿಗೆ ಬರುತ್ತಿದ್ದ. ಇದರೊಳಗೆ ಬಂದು ಸೊಂಟದ

